# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 25.05.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ ಗುಂಜೂರು (ಕಾರ್ಮೆಲಾರಂ) ಸ.ನಂ. 95 ರಲ್ಲಿ 9 ಎಕರೆ 17 ಗುಂಟೆ ಸರ್ಕಾರಿ ಕೆರೆ ಪ್ರದೇಶವಿದ್ದು, ಸದರಿ ಕೆರೆಯಲ್ಲಿ ಸೆಂಟ್ ಜೋಸೆಫ್ ಮೊನೋಸ್ಟರಿ ಕಾರ್ಮೇಲಾರಂ ರವರು 21 ಗುಂಟೆ ಅತಿಕ್ರಮಣ ಮಾಡಿ ಶೆಡ್‌ಗಳನ್ನು ಮತ್ತು ಮಾವಿನ ತೋಪನ್ನು ನಿರ್ಮಾಣ ಮಾಡಿದ್ದು, ಈ ಬಗ್ಗೆ ಪಾಲಿಕೆ ವತಿಯಿಂದ ಕೆರೆಯ ಪ್ರದೇಶವನ್ನು ಮೋಜಣಿ ಕೈಗೊಂಡು ಸದರಿ ನಕ್ಷೆಯ ದೃಢೀಕರಣಕ್ಕಾಗಿ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರಿಗೆ ಕಳುಹಿಸಿದ್ದ ಮೇರೆಗೆ ತಹಶೀಲ್ದಾರ್‌ರವರು ದೃಢೀಕರಿಸಿದ್ದು, ಕೆರೆಯ ಪ್ರದೇಶದಲ್ಲಿ ಸೆಂಟ್ ಜೋಸೆಫ್ ಮೊನೋಸ್ಟರಿ ಕಾರ್ಮೇಲಾರಂ ರವರು ಅತಿಕ್ರಮಣ ಮಾಡಿರುವುದು ದೃಢಪಟ್ಟಿರುತ್ತದೆ. ಈ ಬಗ್ಗೆ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರು ಅತಿಕ್ರಮಣದಾರರಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆ ನಡೆಸಿ, ದಿನಾಂಕ: 18.05.2011 ರಂದು ತೆರವು ಆದೇಶ ಹೊರಡಿಸಿದ್ದ ಮೇರೆಗೆ ಪರಿಸರ ಕೋಶ (ಕೆರೆಗಳು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ವತಿಯಿಂದ ತೆರವು ಕಾರ್ಯಾಚರಣೆ ಹಮ್ಮಿಕೊಂಡು, ಅನಧಿಕೃತ ಶೆಡ್‌ಗಳು ಮತ್ತು ತಂತಿ ಬೇಲಿಯನ್ನು ತೆರವುಗೊಳಿಸಿ, ಒತ್ತುವರಿ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಂಡು ಬಿಬಿಎಂಪಿ ವತಿಯಿಂದ ಚೈನ್ ಲಿಂಕ್ ತಂತಿ ಬೇಲಿ ನಿರ್ಮಿಸಲಾಗಿದೆ.

ಸದರಿ ಕಾರ್ಯಾಚರಣೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಸರ ಕೋಶದ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಸಹಾಯಕ ಅಭಿಯಂತರರು, ಬಿ.ಎಂ.ಟಿ.ಎಫ್. ಕಾರ್ಯಪಡೆ, ಸ್ಥಳೀಯ ಪೋಲಿಸರು ಮತ್ತು ಇತರೆ ಸಿಬ್ಬಂದಿಗಳೊಂದಿಗೆ ಕಾರ್ಯಾಚರಣೆಯನ್ನು ನಡೆಸಲಾಗಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರರು, ಪರಿಸರ ಕೋಶ (ಕೆರೆಗಳು) ರವರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 25.05.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ಇಂದು ಇಲಾಖಾವಾರು ಪರಿಶೀಲನಾ ಸಭೆ ನಡೆಸಿ, ಜಾಹೀರಾತು ವಿಭಾಗಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

- ಜಾಹೀರಾತು ಏಜೆನ್ಸಿ ನೋಂದಾವಣಿಯನ್ನು ತಕ್ಷಣವೇ ಜಾರಿಗೆ ಬರುವಂತೆ ಸ್ಥಗಿತಗೊಳಿಸುವುದು.
- ಹೈಕೋರ್ಟ್ ಮತ್ತು ಸಿವಿಲ್ ಕೋರ್ಟ್‌ಗಳಲ್ಲಿರುವ ಜಾಹೀರಾತು ಫಲಕಗಳ ನವೀಕರಣಕ್ಕೆ ಸಂಬಂಧಿಸಿದಂತೆ ಇರುವ ತಡೆಯಾಜ್ಞೆಗಳಿಗೆ ಹಿರಿಯ / ನುರಿತ ವಕೀಲರಿಂದ ಬೃ.ಬೆಂ.ಮ.ಪಾಲಿಕೆ 2010-11ನೇ ಸಾಲಿಗೆ ಖಾಸಗಿ ಸ್ವತ್ತುಗಳ ಮೇಲಿರುವ ಫಲಕಗಳು ನವೀಕರಿಸುತ್ತಿದ್ದರು. ನವೀಕರಣ ಪಡೆಯದೇ ಇರುವ ಪ್ರಕರಣ ಘನ ನ್ಯಾಯಾಲಯದ ಗಮನಕ್ಕೆ ತಂದು ಎಲ್ಲಾ ಪ್ರಕರಣಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ನಿರ್ಧರಿಸಲಾಯಿತು.
- ದಿನಾಂಕ: 30.06.2011ಕ್ಕೆ ಎಲ್ಲಾ ಜಾಹೀರಾತು ಫಲಕಗಳ 2010-11ನೇ ಸಾಲಿಗೆ ಫಲಕಗಳ ಅನುಮತಿ ಅವಧಿ ಮುಗಿಯುವುದರಿಂದ ತಕ್ಷಣವೇ ಹೊಸ ಜಾಹೀರಾತು ನೀತಿಯನ್ನು ರಚಿಸಲು ತುರ್ತಾಗಿ ಕ್ರಮ ಕೈಗೊಳ್ಳುವಂತೆ ನಿರ್ಧರಿಸಲಾಯಿತು.
- ಬೆಂಗಳೂರು ನಗರದಲ್ಲಿ 2000 ಕ್ಕೂ ಅಧಿಕ ಪೋಲಿಸ್ ಅಂಬ್ರೆಲಾಗಳಿದ್ದು, ಈ ಪೈಕಿ 60 ಅಂಬ್ರೆಲಾಗಳಿಗೆ ಜಾಹೀರಾತು ಹಕ್ಕುಗಳ ವಿರುದ್ಧ ಬಿ.ಓ.ಟಿ. ಆಧಾರದ ಮೇಲೆ ನಿರ್ಮಾಣ ಮಾಡಿದ್ದು, ಉಳಿದ 1940 ಅಂಬ್ರೆಲಾಗಳಿಗೆ ಹರಾಜು ನಡೆಸಲು ನಿರ್ಧರಿಸಲಾಯಿತು.
- ರೈಲ್ವೆ ಸ್ವತ್ತಿನಲ್ಲಿ ಈಗ ಇರುವ 200 ಜಾಹೀರಾತು ಫಲಕಗಳಿಗೆ ಸಮಾನಾಂತರವಾಗಿ ಬಿಬಿಎಂಪಿ ಸ್ವತ್ತಿನಲ್ಲಿ ಇರುವ ಸುಮಾರು 300 ಫಲಕಗಳನ್ನು ಹರಾಜು ಮುಖಾಂತರ ಜಾಹೀರಾತು ಪ್ರದರ್ಶಿಸಲು ನಿರ್ಧರಿಸಲಾಯಿತು.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಕಟೌಟ್, ಪೋಸ್ಟರ್ಸ್, ಫ್ಲೆಕ್ಸ್ ಬ್ಯಾನರ್ಸ್, ಶುಭಾಶಯ ಸಂದೇಶಗಳು, ಇತ್ಯಾದಿಗಳು ಪಾಲಿಕೆಯ ಅನುಮತಿ ಇಲ್ಲದೇ ಮರಗಳ ಮೇಲೆ, ಗೋಡೆಯ ಮೇಲೆ ಇನ್ನಿತರ ಬಿಬಿಎಂಪಿ ಸ್ವತ್ತುಗಳ ಮೇಲೆ ಭಿತ್ತಿಪತ್ರಗಳನ್ನು ಅಳವಡಿಸುವವರ ವಿರುದ್ಧ ಕರ್ನಾಟಕ ಸಾರ್ವಜನಿಕ ಸ್ಥಳಗಳನ್ನು ವಿರೂಪಗೊಳಿಸುವುದರ ವಿರುದ್ಧ ಕಾಯಿದೆ / ಪ್ರಕಾರ ಮೊಕದ್ದಮೆ ಹೂಡಲು ವಲಯ ಮಟ್ಟದ ಅಧಿಕಾರಿಗಳು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
- ಪೆಟ್ರೋಲ್ ಬಂಕ್‌ಗಳಲ್ಲಿ ಪ್ರದರ್ಶಿಸುತ್ತಿರುವ ಜಾಹೀರಾತುಗಳಲ್ಲಿ ಕಂಪನಿಯ ಜಾಹೀರಾತುಗಳನ್ನು ಹೊರತುಪಡಿಸಿ, ಇತರೆ ಜಾಹೀರಾತುಗಳು ಪ್ರದರ್ಶಿಸುತ್ತಿರುವ ಪೆಟ್ರೋಲ್ ಬಂಕ್‌ಗಳಿಂದ ಜಾಹೀರಾತು ತೆರಿಗೆಯನ್ನು ವಸೂಲಿ ಮಾಡುವಂತೆ ನಿರ್ಧರಿಸಲಾಯಿತು.

ಈ ಸಂದರ್ಭದಲ್ಲಿ ಉಪ ಮಹಾಪೌರರಾದ ಶ್ರೀ ಎಸ್. ಹರೀಶ್, ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಆರ್. ನಂಜುಂಡಪ್ಪ ರವರು ಹಾಜರಿದ್ದರು.

( ಉಪ ಆಯುಕ್ತರು ಶ್ರೀ ಗೋಪಾಲ 9480685341)

**ಸಾರ್ವಜನಿಕ ಸಂಪರ್ಕಾಧಿಕಾರಿ**